ದಿನಾಂಕಃ **25.07.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : ಎದುರುದಾರರ ಪರ ವಕೀಲರಿಂದ :**

ಆ ದಿನ ನಾನು ಹೋಗುತ್ತಿದ್ದ ಬೈಕ್ ನನಗೆ ಸೇರಿರುತ್ತದೆ. ಸದರಿ ಬೈಕಿಗೆ ವಿಮೆ ಇತ್ತು. ಯಾವ ಕಂಪನಿಯ ವಿಮೆ ಎಂದು ನನಗೆ ಗೊತ್ತಿಲ್ಲ. ನನಗೆ ಸಾರಿಗೆ ನಿಯಮಗಳು ಗೊತ್ತಿರುವ ಕಾರಣ ನನಗೆ ಚಾಲನಾ ಪರವಾನಗಿ ಕೊಟ್ಟಿರುತ್ತಾರೆ ಎಂದರೆ ಸರಿ. ಅಪಘಾತವು ಸರ್ಕಲ್ ನಲ್ಲಿ ಆಗಿರುತ್ತದೆ. ಬೆಂಗಳೂರಿನಿಂದ ಮೈಸೂರಿಗೆ KSRTC Bus ಬರುತ್ತಿತ್ತು ಎಂದರೆ ಸರಿ. ಸರ್ಕಲ್ ಇದ್ದ ಕಾರಣ ನಿಧಾನವಾಗಿ ಜಾಗೃತೆಯಿಂದ ಹೋಗುತ್ತಾರೆ ಎಂದರೆ ಸರಿ. ನಾನು ಪಾಂಡವಪುರದಿಂದ ಬೆಂಗಳೂರು-ಮೈಸೂರು ಹೆದ್ದಾರಿಗೆ ಸೇರಿಕೊಳ್ಳುತ್ತಿದ್ದ ಕಾರಣ ನಿಧಾನವಾಗಿ ಅಲ್ಲಿ ವಾಹನವನ್ನು ಚಲಾಯಿಸಬೇಕು ಎಂದರೆ ಸರಿ. ಮುಖ್ಯ ರಸ್ತೆಗೆ ಸೇರಿಕೊಳ್ಳುವಾಗ ಅಡ್ಡರಸ್ತೆಯಿಂದ ಬರುವವರು ನಿಧಾನವಾಗಿ ಬರಬೇಕು ಎಂದರೆ ಸರಿ. ಆ ದಿನ ನಾನು ಅಜಾಗರೂಕತೆಯಿಂದ ಹೆದ್ದಾರಿಗೆ ವಾಹನವನ್ನು ಚಾಲನೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ರಸ್ತೆಯಲ್ಲಿ ತಿರುವು ತೆಗೆದುಕೊಂಡು ಮುಂದೆ ಹೋದಾಗ ಹಿಂದಿನಿಂದ KSRTC Bus ಬಂದು ಡಿಕ್ಕಿಪಡಿಸಿತು ಎನ್ನುತ್ತಾರೆ. ಸದರಿ ರಸ್ತೆ ಒಟ್ಟು 4 ಪಥದ ರಸ್ತೆ ಎಂದರೆ ಸರಿ. ಪಾಂಡವಪುರದಿಂದ ಬರುವಾಗ ಮೈಸೂರು-ಬೆಂಗಳೂರಿಗೆ ಹೋಗುವ 2 ಪಥಗಳನ್ನು ದಾಟಿ ಡಿವೈಡರ್ ನಿಂದ ಇನ್ನೊಂದು ಭಾಗದಲ್ಲಿರುವ ಬೆಂಗಳೂರು-ಮೈಸೂರು ರಸ್ತೆಗೆ ಸೇರಿಕೊಳ್ಳಬೇಕು ಎಂದರೆ ಸರಿ.

**2.** ನಿಪಿ-3 ರಲ್ಲಿ ನೀವು ಸ್ಕೆಚ್ ನಲ್ಲಿ ಅಪಘಾತ ಎಲ್ಲಿ ಆಗಿರುತ್ತದೆ ಎಂದು ಪೊಲೀಸರಿಗೆ ತೋರಿಸಿರುತ್ತೀರಾ ಎಂದರೆ ಇಲ್ಲ. ಅಪಘಾತವಾದಾಗ ನನ್ನ ಜೊತೆ ನನ್ನ ತಂದೆಯಾಗಲೀ, ಬೇರೆಯವರಾಗಲೀ ಇರಲಿಲ್ಲ ಎಂದರೆ ಸರಿ. ಮೈಸೂರಿನಲ್ಲಿ ನನ್ನ ತಂದೆ-ತಾಯಿ ಕಾಯುತ್ತಿದ್ದು ನಾನು ಮೈಸೂರಿಗೆ ಹೋಗುತ್ತಿದ್ದೆ. ನನ ತಂದೆ-ತಾಯಿ ದೂರವಾಣಿ ಕರೆ ಮಾಡಿ ಬೇಗ ಬಾ ಎಂದು ಹೇಳಿದ್ದರಿಂದ ನಾನು ಗಾಬರಿಯಲ್ಲಿ ವೇಗವಾಗಿ ಬೈಕ್ ಚಾಲನೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆ ದಿನ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಅಂತಿಮ ವರದಿಯಲ್ಲಿ ಹೆಲ್ಮೆಟ್ ಬಗ್ಗೆ ತಿಳಿಸಿಲ್ಲ ಎಂದರೆ ಗೊತ್ತಿಲ್ಲ. ದೂರು ನೀಡುವುದಕ್ಕೆ ನನ್ನ ತಂದೆಗೆ ನಾನು ಮಾಹಿತಿ ಕೊಟ್ಟಿಲ್ಲ. ನಾನು ಆ ದಿನ ಸಂಜೆ 4.00 ಗಂಟೆಗೆ ಮನೆ ಬಿಟ್ಟಿರುತ್ತೇನೆ, 5.30 ಕ್ಕೆ

ಅಪಘಾತವಾಗಿರುತ್ತದೆ. ಪೊಲೀಸರು ನನಗೆ ಪ್ರಜ್ಞೆ ಬಂದ ನಂತರದಲ್ಲಿ ಹೇಳಿಕೆ ಪಡೆದುಕೊಂಡಿರುತ್ತಾರೆ. ನನಗೆ ಅಪಘಾತವಾದ ನಂತರ ಸುಮಾರು 20-25 ದಿನ ಪ್ರಜ್ಞೆ ಇರಲಿಲ್ಲ.

**3.** ಆ ದಿನ ನನ್ನ ತಂದೆ-ತಾಯಿ ಕಾಯುತ್ತಿದ್ದ ಕಾರಣ ಅತಿವೇಗ, ಅಜಾಗರೂಕತೆಯಿಂದ ಬೈಕನ್ನು ಚಾಲನೆ ಮಾಡಿದ್ದರಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನಾನೇ ಹೋಗಿ ಬಸ್ಸಿಗೆ ಗುದ್ದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತವಾದರೇ ವಿಮೆ ಸಿಗುವುದಿಲ್ಲವೆಂದು ಸುಳ್ಳು ದೂರು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಅಪಘಾತವಾದರೇ ನಿಪಿ-4 ರಲ್ಲಿ ಹೇಳಿರುವಂತಹ ಜಖಂಗಳು ನನ್ನ ಬೈಕಿಗೆ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಬಸ್ಸಿನ ಚಾಲಕ ಬ್ರೇಕ್ ಹಾಕಿ ವಾಹನ ನಿಯಂತ್ರಿಸಿದರೂ ನಾನೇ ಅಪಘಾತಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ಮೊದಲು ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆಗೆ ನಂತರ ಮಣಿಪಾಲ್ ಆಸ್ಪತ್ರೆಗೆ ಸೇರಿಸಿರುತ್ತಾರೆ. ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ವಯಸ್ಸು 35 ಎಂದು ನಮೂದಾಗಿರುತ್ತದೆ. ಸದರಿ ದಾಖಲೆಯನ್ನು **ನಿ.ಆರ್-1** ಎಂದು ಗುರುತಿಸಲಾಯಿತು. ನನ್ನ ತಪ್ಪಿನಿಂದ ಸದರಿ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ.

**4.** ನಾನು ಮಾಸಿಕವಾಗಿ ರೂ.50,000/- ಸಂಪಾದನೆ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆ ಕೊಟ್ಟಿಲ್ಲ. ನನಗೆ ನಾನು ಹೇಳಿದಷ್ಟು ಆದಾಯ ಇಲ್ಲ ಎಂದರೆ ಸರಿಯಲ್ಲ. ನಾನು ಚಿಕಿತ್ಸೆಗಾಗಿ ಒಳರೋಗಿಯಾಗಿ 80 ದಿನ ಆಸ್ಪತ್ರೆಗೆ ದಾಖಲಾಗಿಲ್ಲ ಹಾಗೂ 25 ಲಕ್ಷ ರೂ.ಗಳನ್ನು ಚಿಕಿತ್ಸೆಗಾಗಿ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿದ್ದ ಸಮಯದಲ್ಲಿ ಪ್ರತಿದಿನ 500/- ರೂ.ಗಳನ್ನು ಸಹಾಯಕನಿಗೆ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಹೊರರೋಗಿಯಾಗಿ ಚಿಕಿತ್ಸೆ ಪಡೆಯುವಾಗ ವಾಹನ ಮತ್ತು ಇತರೇ ಖರ್ಚು ಪ್ರತಿಬಾರಿಗೆ ರೂ.8,000/- ಮಾಡಿಲ್ಲ ಎಂದರೆ ಸುಳ್ಳು. ಭವಿಷ್ಯದ ಚಿಕಿತ್ಸೆಗಾಗಿ 10 ಲಕ್ಷ ರೂ. ಅವಶ್ಯಕತೆ ಇಲ್ಲ ಎಂದರೆ ಸುಳ್ಳು. ಅಪಘಾತಕ್ಕೂ ಮುಂಚೆ ನಾನು ಚೆನ್ನಾಗಿದ್ದು, ಈಗಲೂ ಸಹ ಚೆನ್ನಾಗಿರುತ್ತೇನೆ ಎಂದರೆ ಸುಳ್ಳು. ಅಪಘಾತ ನನ್ನ ತಪ್ಪಿನಿಂದ ಆಗಿದ್ದು ವಿಮೆ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ವೈದ್ಯರು ನೀಡಿದ ಸಲಹಾ ಚೀಟಿಯಲ್ಲಿರುವ ಔಷಧಿಗಳನ್ನು ಮಾತ್ರ ನಾವು ಖರೀದಿಸಿರುತ್ತೇವೆ ಎಂದರೆ ಸರಿ. ನನ್ನ ಬೈಕಿಗೆ ವಿಮೆ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಬೈಕಿಗೆ ವಿಮೆ ಇಲ್ಲದ ಕಾರಣ ಬಸ್ ವಿರುದ್ಧ ಪ್ರಕರಣ ದಾಖಲು ಮಾಡಿರುತ್ತೇವೆಂದರೆ ಸರಿಯಲ್ಲ. ಹೆಚ್ಚಿನ

ಪರಿಹಾರ ಪಡೆಯಲು ದಾಖಲೆಗಳನ್ನು ಸೃಷ್ಟಿಸಿಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ಪರಿಹಾರ ಕೊಡಲು ಭಾದ್ಯಸ್ಥರಿರುವುದಿಲ್ಲ ಎಂದರೆ ಸರಿಯಲ್ಲ. ಬೈಕಿಗೆ ವಿಮೆ ನೀಡಿರುವ ಕಂಪನಿಯನ್ನು ಪಕ್ಷಗಾರರನ್ನಾಗಿ ಮಾಡಿ ಪರಿಹಾರ ಪಡೆದುಕೊಳ್ಳಲು ತೊಂದರೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. **ಮರು ವಿಚಾರಣೆ : ಅರ್ಜಿದಾರರ ಪರ ವಕೀಲರಿಂದ :**

3 ಮೆಡಿಕಲ್ ಬಿಲ್ಲುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-21 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಎದುರುದಾರರ ಪರ ವಕೀಲರಿಂದ :**

ವೈದ್ಯರ ಸಲಹೆಗಳನ್ನು ಸರಿಯಾಗಿ ಪಾಲಿಸದ ಕಾರಣ ಮುಂದುವರೆದ ಚಿಕಿತ್ಸೆಯನ್ನು ಪಡೆದುಕೊಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.) ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಎಂ.ಎ.ಸಿ.ಟಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**